# ಜಾನಪದ ಮೌಖಿಕ ಸಾಹಿತ್ಯದಲ್ಲಿ ಪ್ರಕಟಗೊಂಡ ಪ್ರಾದೇಶಿಕ ಸಂಸ್ಕೃತಿ
# (ಕುಂದಾಪುರ ತಾಲೂಕನ್ನು ಅನುಲಕ್ಷಿಸಿ )

## (ಯುಜಿಸಿ ಪ್ರಾಯೋಜಿತ ಕಿರು ಸಂಶೋಧನ ಯೋಜನೆಯ ಅಂತಿಮ ವರದಿಯ ಫಲಿತಗಳು ಮತ್ತು ಅದರ ಸಾಮಾಜಿಕ ಮಹತ್ವ)

ನಿತ್ಯಾನಂದ
ಉಪನ್ಯಾಸಕರು, ಕನ್ನಡ ವಿಭಾಗ
ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ
ಉಡುಪಿ ಜಿಲ್ಲೆ, ಕರ್ನಾಟಕ

ಕರ್ನಾಟಕದ ಸಂದರ್ಭದಲ್ಲಿ ಜಾನಪದ ಮೌಖಿಕ ಪರಂಪರೆಯ ಕುರಿತ ಅಧ್ಯಯನದ ಆಸಕ್ತಿ ಮೊಳೆತು ಎರಡು ಶತಮಾನಗಳೇ ಕಳೆದಿವೆ. ಹೀಗೆ ಮೌಖಿಕ ಪರಂಪರೆ ಕುರಿತ ಇಷ್ಟು ದೀರ್ಘಕಾಲೀನ ಅಧ್ಯಯನಗಳು ಕರ್ನಾಟಕದ ಸಾಂಸ್ಕೃತಿಕ ರೂಪವನ್ನು ಬರಹದ ದಾಖಲೆಗಳ ಮೂಲಕ ಕಟ್ಟಿದ ರೂಪಕ್ಕಿಂತ ಬಿನ್ನವಾಗಿ ಚಿತ್ರಿಸಿವೆ. ಪ್ರಸ್ತುತ ಕರ್ನಾಟಕದಲ್ಲಿ ಜಾನಪದ ಅಧ್ಯಯನ ಒಂದು ಪ್ರಮುಖ ಜ್ಞಾನಶಿಸ್ತಾಗಿ ಹೊರಹೊಮ್ಮಿದ್ದು, ಇದಕ್ಕೆ ಸುಮಾರು ೧೫೦ ವರ್ಷಗಳ ಅಧ್ಯಯನದ ಇತಿಹಾಸವಿದೆ. ಈ ಕಾಲಘಟ್ಟದಲ್ಲಿ ಜಾನಪದವನ್ನು ತಿಳಿಯುವ, ವಿಶ್ಲೇಷಿಸುವ, ಸಂಸ್ಕೃತಿಯನ್ನು ನಿರ್ವಚಿಸುವ, ಚರಿತ್ರೆಯನ್ನು ಬಿನ್ನವಾಗಿ ಗ್ರಹಿಸುವ– ಹೀಗೆ ಅನೇಕ ಆಯಾಮಗಳಲ್ಲಿ ಸ್ಥಿತ್ಯಂತರಗಳು ಸಂಭವಿಸಿವೆ. ಜಾಗತಿಕವಾಗಿ ೧೯೬೦ರ ದಶಕದ ನಂತರ ನಡೆದ ತಾತ್ವಿಕ ಪಲ್ಲಟಗಳು ಸ್ವಲ್ಪ ಮಟ್ಟಿಗಾದರೂ ಜಾನಪದ ಅಧ್ಯಯನಗಳನ್ನು ಪ್ರಭಾವಿಸಿವೆ. ಈ ಹಿನ್ನೆಲೆಯಲ್ಲಿ ಕಳೆದ ಸುಮಾರು ನಾಲ್ಕೈದು ದಶಕಗಳಿಂದೀಚೆಗೆ ಜಾನಪದ ಅಧ್ಯಯನದ ವಿಧಾನಕ್ರಮಗಳು ಹಲವು ಬಗೆಯ ಪರಿವರ್ತನೆಗಳೊಂದಿಗೆ ಆಧುನಿಕ ಸ್ವರೂಪವನ್ನು ಪಡೆದುಕೊಂಡಿವೆ.

ಕನ್ನಡದ ಸಂದರ್ಭದಲ್ಲಿ ಈವರೆಗೆ ನಡೆದ ಅನೇಕ ಜಾನಪದ ಅಧ್ಯಯನಗಳು **'ಸಾಂಸ್ಕೃತಿಕ ಅಧ್ಯಯನ'**ದ ಸ್ವರೂಪವನ್ನು ಪಡೆದುಕೊಳ್ಳುತ್ತಿವೆ. ಈ ಮಾದರಿಯ ಅಧ್ಯಯನಗಳು ಬಹುಸ್ತರೀಯ, ಬಹುಶಿಸ್ತೀಯ, ಬಹುಕೇಂದ್ರಿತ, ಬಹುಸಂವೇದನೆಗಳ ವಿಧಾನವಾಗಿ, ರಾಜಕೀಯ, ಸಾಮಾಜಿಕ, ಧಾರ್ಮಿಕ ಇತ್ಯಾದಿ ವಿನ್ಯಾಸಗಳನ್ನು ಒಳಗೊಂಡ ಸಂಯುಕ್ತ ಪರಿಭಾಷೆಯಾಗಿ ರೂಪುಗೊಳ್ಳುತ್ತಿವೆ. ಈ ಬಗೆಯ ಪಲ್ಲಟಗಳು ಸ್ಥಳೀಯ ಮಟ್ಟದಲ್ಲಿ ಜಾನಪದ ಅಧ್ಯಯನಕ್ಕೆ ಸಂಬಂಧಿಸಿದಂತೆ ಹೊಸಬಗೆಯ ಸಾಧ್ಯತೆ ಮತ್ತು ಅವಕಾಶಗಳನ್ನು ಸೃಷ್ಟಿಸಿವೆ.

ಕನ್ನಡದಲ್ಲಿ ಪರಿಚಲನೆಗೊಳ್ಳುತ್ತಿರುವ ಮಾನವಿಕಗಳಲ್ಲಿ ಜಾನಪದ ಹೆಚ್ಚು ಕ್ರಿಯಾಶೀಲವಾದುದು. ಹವ್ಯಾಸದ ರೂಪದಲ್ಲಿ ಜನಪದ ಸಾಹಿತ್ಯವನ್ನು ಕೇಳಿಸಿ ಬರೆದುಕೊಳ್ಳುವಲ್ಲಿಂದ ಆರಂಭವಾದ ನಮ್ಮ ಜಾನಪದ ಸಂಗ್ರಹ, ಇಂದು ಮಾನವಿಕ ವಿಜ್ಞಾನದ ಒಂದು ಶಾಖೆಯಾಗಿ ಬೆಳೆದಿದೆ. ಸಾಹಿತ್ಯ ವಿಭಾಗದಲ್ಲಿ ಮೊದಲ ಪೋಷಣೆ ಕಂಡ ಜಾನಪದ ಇಂದು ಅದರಾಚೆಗೆ ತನ್ನ ಅಸ್ತಿತ್ವವನ್ನು ಕಂಡುಕೊಂಡಿದೆ. ಪ್ರಾದೇಶಿಕ ಅಧ್ಯಯನದ ಅವಕಾಶಗಳು ವೈವಿಧ್ಯಮಯ ನೆಲೆಯಲ್ಲಿ ತೆರೆದುಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಜಾನಪದ ಸಾಹಿತ್ಯ ಮತ್ತು ಇತರ ಜಾನಪದ ಸಂಬಂಧಿ ವಿಷಯಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಆದ್ದರಿಂದ ಜಾನಪದ ಅಧ್ಯಯನದ ಸಂದರ್ಭದಲ್ಲಿ ನಿರೂಪಕ, ಸಂಗ್ರಾಹಕ ಮತ್ತು ವಿದ್ವಾಂಸರ ನಡುವಣ ಏರ್ಪಡಬಹುದಾದ ಸಮನ್ವಯ ನಿರ್ಣಾಯಕವಾದುದು. ಈ ಬಗೆಯ ಅಧ್ಯಯನ ಹೆಚ್ಚೆಚ್ಚು ಶ್ರಮವನ್ನೂ, ತಾತ್ವಿಕ ಒಳರಚನೆಯನ್ನೂ ಬಯಸುತ್ತಿದೆ.

.....೨.